ಸರಳ ವಾಸ್ತು ಮತ್ತು ಸರಳ್ ಫೆಂಗಶೂಯಿ ದರ್ಶನ



ಉದಯಕುಮಾರ ಹಬ್ಬು

ಸರಳ ವಾಸ್ತು ಮತ್ತು ಸರಳ್ ಫೆಂಗಶೂಯಿ ದರ್ಶನ

ಉದಯಕುಮಾರ ಹಬ್ಬು

ಮುನ್ನುಡಿ

ಉದಯ ಕುಮಾರ್ ಹಬ್ಬು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿ, ಕಥೆ, ವಿಮರ್ಶೆ, ಕವಿತೆಗಳನ್ನು ಬರೆದುಕೊಂಡಿದ್ದವರು. ಇತ್ತೀಚಿನ ವರ್ಷಗಳಲ್ಲಿ ಅವರು ಆಧ್ಯಾತ್ಮ, ತತ್ತ್ವಶಾಸ್ತ್ರ ಇತ್ಯಾದಿ ಕ್ಷೇತ್ರಗಳ ಅಧ್ಯಯನ ನಡೆಸುತ್ತಾ ತಮ್ಮ ಚಿಂತನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದನ್ನು ನಾನು ಗಮನಿಸಿದ್ದೇನೆ. ಹಾಗಾಗಿ ಅವರು ನನ್ನ ಕೈಯಲ್ಲಿ **'ಸರಳ ವಾಸ್ತು ಮತ್ತು ಸರಳ ಫೆಂಗ್‌ಶೂಯಿ ದರ್ಶನ'** ಎಂಬ ಕೃತಿಯನ್ನು ನೀಡಿ ಅದಕ್ಕೊಂದು ಪ್ರವೇಶಿಕೆಯನ್ನು ಬರೆಯಬೇಕೆಂದು ಕೇಳಿಕೊಂಡಾಗ ನನಗೆ ಆಶ್ಚರ್ಯ ಆಗಲಿಲ್ಲ.

ಹಬ್ಬು ಅವರಿಗೆ ತಮ್ಮ ಅಧ್ಯಯನದ ಉಪಯುಕ್ತ ಭಾಗಗಳನ್ನು ಓದುಗರ ಅನುಕೂಲಕ್ಕಾಗಿ ಸಂಗ್ರಹಿಸಿ ನೀಡಬೇಕೆಂಬ ತುಡಿತ ಇದೆ. ಅದರ ಒಂದು ಉದಾಹರಣೆಯಾಗಿ ಈ ಪುಸ್ತಕ ಹೊರಬರುತ್ತಿದೆ. ವಾಸ್ತು ಶಾಸ್ತ್ರ ಮತ್ತು ಚೀನೀಯರ ವಾಸ್ತುಶಾಸ್ತ್ರವಾದ ಫೆಂಗ್‌ಶೂಯಿ ಎಂಬ ಶಾಸ್ತ್ರಗಳ ಒಂದು ಪ್ರಾಥಮಿಕ ಪರಿಚಯವನ್ನು ಉದಯಕುಮಾರ್ ಹಬ್ಬು ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಮಾಡಿಕೊಟ್ಟಿದ್ದಾರೆ.

ಈ ಸಲಹೆಗಳೆಲ್ಲ ಆಯಾಯ ಶಾಸ್ತ್ರಕ್ಕನುಗುಣವಾಗಿವೆ. ಓದುಗರು ತಮಗೆ ಹಿತವೆನಿಸಿದ ಶಾಸ್ತ್ರದಿಂದ ಸಲಹೆಯನ್ನು ಪಡೆದು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲಿ ಎಂಬ ಆಶಯ ಲೇಖಕರದು. ಈ ಶಾಸ್ತ್ರಗಳ ಸಮನ್ವಯವನ್ನು ಅವರು ಮಾಡಲು ಪ್ರಯತ್ನಿಸಿಲ್ಲ. ಉದಾಹರಣೆಗೆ ಫೆಂಗ್‌ಶ್ವಯ್ ಪ್ರಕಾರ ದಕ್ಷಿಣ ದಿಕ್ಕಿನ ಮುಖದ್ವಾರ ಅತ್ಯಂತ ಪ್ರಶಸ್ತ. ಆದರೆ ವಾಸ್ತು ಶಾಸ್ತ್ರ ಅದನ್ನು ಯಮನ ದಿಕ್ಕು ಎಂದು ಗುರುತಿಸುತ್ತದೆ; ದಕ್ಷಿಣ ದಿಕ್ಕಿನಲ್ಲಿ ಬಾಗಿಲು ಪ್ರಶಸ್ತವಲ್ಲ ಎಂದಿದೆ. ಬಾಗಿಲು ಇರುವ ದಿಕ್ಕು ಮುಖ್ಯವೇ ಅಲ್ಲವೇ? ಓದುಗರಿಗೆ ಇದು ಗೊಂದಲ ಹುಟ್ಟಿಸುವ ವಿಚಾರವಾಗಬಹುದು.

ಲೇಖಕನ ಜಾಣ್ಮೆ ಇಂತಹ ಕಡೆಗಳಲ್ಲಿ ವ್ಯಕ್ತವಾಗಿದೆ. ಅವರು ಫೆಂಗ್‌ಶ್ವಯ್ ಹೇಳುವ ದಿಕ್ಕುಗಳನ್ನು ಹೇಳಿಲ್ಲ. ಬಾಗಿಲು ಹೇಗಿರಬೇಕು, ಅದರ ಮೂಲಕ ಶಕ್ತಿ ಚೈತನ್ಯ 'ಕಿ' ಹೇಗೆ ಪ್ರವಹಿಸಬೇಕು ಇಂತಹ ಸಾರ್ವದೇಶಿಕ – ಸಾರ್ವಕಾಲಿಕ ಸಂಗತಿಗಳಿಗೆ ತಮ್ಮ ಕೃತಿಯನ್ನು ಸೀಮಿತಗೊಳಿಸಿದ್ದಾರೆ. ಇವುಗಳನ್ನು ಅನುಸರಿಸುವುದರಿಂದ ತೊಂದರೆ ಆಗಲಾರದು; ಅದೃಷ್ಟ ಖುಲಾಯಿಸಲೂ ಬಹುದು.

ಅಲ್ಲಲ್ಲಿ ಲೇಖಕರು ಒಂದು ಸೂಚನೆ ನೀಡಿದ್ದಾರೆ – ಫೆಂಗ್‌ಶ್ವಯ್ ತಜ್ಞರು ನಿಮಗೆ ಸರಿಯಾದ ಮಾರ್ಗದರ್ಶನ ಮಾಡುತ್ತಾರೆ ಎಂದಿದ್ದಾರೆ. ಇಲ್ಲಿ ಕೊಟ್ಟಿರುವಂತಹದು ಸರಳವಾದ ಎಲ್ಲರೂ ಅನುಸರಿಸಬಹುದಾದ ಸೂತ್ರಗಳು ಅಷ್ಟೆ. ಆದುದರಿಂದ ಅವರು ನೀಡಿರುವ **'ಸರಳ ವಾಸ್ತು ಮತ್ತು ಸರಳ ಫೆಂಗ್‌ಶೂಯಿ ದರ್ಶನ'** ಎಂಬ ಶೀರ್ಷಿಕೆ ಸೂಕ್ತವಾಗಿದೆ.

ಹಲವು ಚಿಂತನೆಗಳನ್ನು ಇಂತಹ ಪುಸ್ತಕಗಳು ಪ್ರೇರೇಪಿಸುತ್ತವೆ. ಉದಾಹರಣೆಗೆ ವಾಸ್ತು ಮತ್ತು ಫೆಂಗ್ ಶ್ವಯ್ ಒಂದೆಯೋ, ವಿಭಿನ್ನವೂ ತದ್ವಿರುದ್ಧವೂ ಆಗಿರುವ ಶಾಸ್ತ್ರಗಳೋ? ಅಥವಾ ಒಂದೇ ಬಗೆಯ ಶಾಸ್ತ್ರಗಳಾಗಿದ್ದೂ ತದ್ವಿರುದ್ಧ ವಿಚಾರಗಳನ್ನು ಹೇಳುವ ಜ್ಞಾನಮಾರ್ಗಗಳೋ? ಇಂತಹ ಪ್ರಶ್ನೆಗಳನ್ನು ಕೇಳಲು ಓದುಗರನ್ನು ಜಿಜ್ಞಾಸೆಗೆ ತೊಡಗಿಸುತ್ತವೆ. ಲೇಖಕರು ಅದರ ಬಗ್ಗೆ ಓದುಗರು ತಮ್ಮ ಸ್ವಂತ ಅನುಭವದಿಂದ ಉತ್ತರ ಕಂಡುಕೊಳ್ಳಬಹುದೆಂದು ಸೂಚಿಸುತ್ತಾರೆ. ನಾವು ವಾಸಿಸುವ ಮನೆಯಲ್ಲಿ ಎಲ್ಲಿ ಏನನ್ನಿಟ್ಟರೆ ನಮ್ಮ ಅದೃಷ್ಟ ಹೇಗೆ ಏರುಪೇರಾಗುತ್ತದೆ ಎನ್ನುವುದನ್ನು ಸದಾ ಜಾಗೃತರಾಗಿರುತ್ತ ಗಮನಿಸುವುದು ಒಂದು ಒಳ್ಳೆಯ ಬೌದ್ಧಿಕ ಚಟುವಟಿಕೆಯೂ ಆಗುತ್ತದೆ; ಪ್ರಕೃತಿ ಮತ್ತು ಅದರಲ್ಲಿರುವ ಶಕ್ತಿ ಸಂಚಲನಗಳ ಬಗ್ಗೆ ಎಚ್ಚರವಾಗಿರುವುದಕ್ಕೆ ಪ್ರೇರಣೆಯೂ ಆಗುತ್ತದೆ.

ಹಾಗಾಗಿ ಇದೊಂದು ಒಳ್ಳೆಯ ಉಪಕ್ರಮವೆಂದೇ ನಾನು ಭಾವಿಸುತ್ತೇನೆ. ಇದಮಿತ್ಥಂ ಎಂದು ನಮ್ಮ ನಮ್ಮ ಮೂಗಿನ ನೇರಕ್ಕೆ ಸಮನ್ವಯ ಮಾಡಿ ಹೇಳುವುದಕ್ಕಿಂತ ಓದುಗರನ್ನು ಶಿಕ್ಷಿತರನ್ನಾಗಿ ಮಾಡಿ ಚಿಂತನೆಗೆ ಹಚ್ಚುವುದು ಈ ರೀತಿಯ ಪುಸ್ತಕದಿಂದ ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಉದಯ ಕುಮಾರ್ ಹಬ್ಬು ಹೊಸಬಗೆಯ ಕೃತಿಯೊಂದರ ಮೂಲಕ ಬೇರೊಂದು ಕ್ಷೇತ್ರಕ್ಕೆ ಕಾಲಿರಿಸುತ್ತಿದ್ದಾರೆ. ಅವರ ಅಧ್ಯಯನದ ಫಲವು ಹೀಗೆಯೇ ಓದುಗರಿಗೆ ಸಿಗುತ್ತಿರಲಿ.

ಬೆಳ್ಮಣ್ಣು
18.3.2015

ಡಾ. ಬಿ. ಜನಾರ್ದನ ಭಟ್

ಸಂಗ್ರಹಕಾರನ ನುಡಿ

ಇಲ್ಲಿನ ವಿಚಾರಗಳು ಸಂಗ್ರಹಕಾರನ ಸ್ವಂತ ಅನುಭವದಿಂದ ಮೂಡಿ ಬಂದಿದ್ದಲ್ಲವಾದರೂ ಪ್ರಾಚೀನ ಋಷಿಗಳು ದಾಖಲಿಸಿಟ್ಟ ಹಲವಾರು ವಿಷಯಗಳನ್ನು ಸರಳವಾಗಿ ಜನರಿಗೆ ತಿಳಿಯಪಡಿಸುವ ಹಂಬಲದಿಂದ ಹಲವಾರು ವಿಷಯಗಳನ್ನು ಸಂಗ್ರಹಿಸಲಾಗಿವೆ. ನನ್ನದೆ ಮನೆಯು ವಾಸ್ತು ಪ್ರಕಾರವಾಗಿದೆ. ಉತ್ತರಕ್ಕೆ ಪ್ರಧಾನ ಬಾಗಿಲು ಇದೆ. ಈಶಾನ್ಯಕ್ಕೆ ಬಾವಿ ಇದೆ. ಆಗ್ನೇಯ ಪೂರ್ವಕ್ಕೆ ಅಡುಗೆ ಕೋಣೆ ಇದೆ. ಈಶಾನ್ಯಕ್ಕೆ ದೇವರ ಕೋಣೆ ಇದೆ. ಮತ್ತು ಚೀನದ ಫೆಂಗ್‌ಶೂಯಿ ಪ್ರಕಾರವೂ ಇದೆ. ಉತ್ತರಕ್ಕೆ ಪ್ರಧಾನ ಬಾಗಿಲು ಇದ್ದರೆ ಆ ಮನೆಯಲ್ಲಿ ಪ್ರತಿ ಮೂಲೆಯಲ್ಲಿ ಬೆಳಗ್ಗಿನಿಂದ ಸಾಯಂಕಾಲದವರೆಗೂ ಬೆಳಕು ತುಂಬಿರುತ್ತದೆ. ಬೆಳಿಗ್ಗೆ ಉದಯಿಸುವ ಸೂರ್ಯನ ಕಿರಣಗಳು ಮತ್ತು ಅಸ್ತಮಿಸುವಾಗ ಸೂರ್ಯನ ಕಿರಣಗಳು ಮನೆಯನ್ನು ಮತ್ತು ಮನವನ್ನು ಬೆಳಗಿಸುತ್ತದೆ. ಪೂರ್ವಕ್ಕೆ ಜಾಗವು ತಗ್ಗಾಗಿ ಪಶ್ಚಿಮಕ್ಕೆ ಎತ್ತರವಾಗಿದ್ದರೆ ಆ ಮನೆಯು ಉನ್ನತಿಯನ್ನು ಹೊಂದುವುದು ಎಂಬ ಮಾತೊಂದಿದೆ. ಅಂತೆಯೇ ಸಂಗ್ರಹಕಾರನ ಮನೆಯ ಜಾಗವಿದೆ. ಹಾಗಾಗಿ ವಾಸ್ತುಶಾಸ್ತ್ರವಾಗಲಿ ಅಥವಾ ಫೆಂಗ್‌ಶೂಯಿ ಆಗಲಿ ಅಲಕ್ಷಿಸುವ ಅಥವಾ ಅವೈಜ್ಞಾನಿಕ ಎಂದು ಬದಿಗೆ ಸರಿಸುವಂತಿಲ್ಲ. ಇಲ್ಲಿನ ವಿಚಾರಗಳನ್ನು ಓದಿ ನಿಮ್ಮ ಅನುಭವದ ನಿಕಷಕ್ಕೆ ಒಡ್ಡಿ ಎಂದಿಷ್ಟೆ ಸಂಗ್ರಹಕಾರ ಹೇಳಬಲ್ಲ. ಅಲ್ಲವೆ?

ವಾಸ್ತುಶಾಸ್ತ್ರಕ್ಕೆ ಸಂಬಂಧಪಟ್ಟ ಹಲವಾರು ಗ್ರಂಥಗಳನ್ನು ವಾಸ್ತುತಜ್ಞ ಡಾ। ಪದ್ಮನಾಭ ಭಟ್ಟರು ನನಗೆ ನೀಡಿ ಮಹದುಪಕಾರ ಮಾಡಿದ್ದಾರೆ. ಮುನ್ನುಡಿಯ ನಲ್ನುಡಿಯನ್ನು ಫೆಂಗ್‌ಶೂಯಿ ತಜ್ಞ ಡಾ। ಬಿ. ಜನಾರ್ಧನ ಭಟ್ಟರು ಬರೆದು ಹರಸಿದ್ದಾರೆ. ಈ ಈರ್ವರು ಪಂಡಿತದ್ವಯರಿಗೆ ತುಂಬು ಹೃದಯದ ಕೃತಜ್ಞತೆಗಳು. ಮುಖಪುಟ ವಿನ್ಯಾಸವನ್ನು ಅಂದವಾಗಿ ಮಾಡಿದ ಶ್ರೀ ವೆಂಕಟರಮಣ ಭಟ್ ಇವರಿಗೆ ಕೃತಜ್ಞತೆಗಳು. ಶ್ರೀಮತಿ ಶ್ವೇತಾ ಇವರು ಡಿಟಿಪಿ ಮಾಡಿರುತ್ತಾರೆ. ನ್ಯೂ ಸಂದೇಶ್ ಪ್ರಿಂಟರ್ಸ್, ಕಿನ್ನಿಗೋಳಿ ಇದರ ಮಾಲಕರಾದ ಶ್ರೀ ರೋಶನ್ ಡಿ'ಸೋಜ ಕ್ಲಪ್ತ ಸಮಯಕ್ಕೆ ಮುದ್ರಣ ಮಾಡಿ ಕೊಟ್ಟಿರುತ್ತಾರೆ. ಅವರೆಲ್ಲರಿಗೂ ಗೌರವಪೂರ್ವಕ ಕೃತಜ್ಞತೆಗಳು.

ಉದಯಕುಮಾರ ಹಬ್ಬು

ಕಿನ್ನಿಗೋಳಿ – 574 150